ಒ. ಎಸ್. ನಂ.28 /2018

ಪಿಡಬ್ಲೂ-1

ದಿನಾಂಕಃ 10.09.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು :- ಶ್ರೀ. ಪ್ರತಿವಾದಿ ಪರ ವಕೀಲರಿಂದಃ-

ಏನು ಪರಿಹಾರ ಕೋರಿ ದಾವೆ ಹೂಡಿರುತ್ತೀರಾ ಎಂದರೆ ನಾವು ಕಟ್ಟಿರುವ ಮನೆಗೆ ತೊಂದರೆ ಕೊಟ್ಟಿರುತ್ತಾರೆ ಎಂದು ಹೂಡಿರುತ್ತೇನೆ. ಸರ್ವೆ ನಂಬರ್ 147 ರಲ್ಲಿ ವಿಸ್ತೀರ್ಣ 19 ಗುಂಟೆ ಯನ್ನು ನಾನು ಖರೀದಿ ಮಾಡಿರುತ್ತೇನೆ. ಚಕ್ಕುಬಂಧಿ ಪೂರ್ವಕ್ಕೆ ಗ್ರಾಮ ಠಾಣೆ , ಪಶ್ಚಿಮಕ್ಕೆ ಕೆಂಪಲಿಂಗು, ಉತ್ತರಕ್ಕೆ ಗ್ರಾಮ ಠಾಣೆ ಮತ್ತು ದಕ್ಷಿಣಕ್ಕೆ ಕುಮಾರ್. ಸದರಿ ಆಸ್ತಿಯನ್ನು ದಿನಾಂಕ 12.07.2001 ರಲ್ಲಿ ಖರೀದಿ ಮಾಡಿರುತ್ತೇನೆ. ಕ್ರಯ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತಿರುತ್ತವೆ. ಸದರಿ ಕ್ರಯ ಪತ್ರದಲ್ಲಿ ಸಾಕ್ಷಿದಾರರಾಗಿ ಯಾರು ಸಹಿ ಮಾಡಿದ್ದಾರೆ ಎಂದು ಗೊತ್ತಿಲ್ಲ. 19 ಗುಂಟೆ ಜಮೀನಿನಲ್ಲಿ ರಾಗಿ ಬೆಳೆ ಬೆಳೆದಿರುತ್ತೇನೆ. ಆ ರೀತಿ ಬೆಳೆ ಬೆದಿರುತ್ತೇನೆ ಎಂದು ತೋರಿಸಲು ಬೆಳೆ ದೃಢೀಕರಣ ಪತ್ರವನ್ನು ಹಾಜರುಪಡಿಸಿರುತ್ತೇನೆ ಆ ರೀತಿ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಇರುವ ಮನೆಗೆ ಸಂಬಂಧಿಸಿದ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ಆ ರೀತಿ ಹಾಜರುಪಡಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾಸ ಸ್ಥಳ ದೃಢೀಕರಣ ಪತ್ರವನ್ನು ಹಾಜರುಪಡಿಸದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಮತ್ತು ಪ್ರತಿವಾದಿ 1 ರಿಂದ 3 ರವರು ಹಕ್ಕಿಪಿಕ್ಕಿ ಬುಡಕಟ್ಟು ಜನಾಂಗಕ್ಕೆ ಸೇರಿದವರು ಎಂದರೆ ಸರಿ. ನಾವು ವೃತ್ತಿಯಲ್ಲಿ ಪ್ಲಾಸ್ಟಿಕ್ ಹೂವನ್ನು ಊರು ಊರು ಮಾರಾಟ ಮಾಡುತ್ತೇವೆ ಎಂದರೆ ಸರಿ.

ನಮ್ಮ ಹಕ್ಕಿಪಿಕ್ಕಿ ಬುಡಕಟ್ಟು ಜನಾಂಗದವರಿಗೆ ಉಚಿತವಾಗಿ ಜಮೀನು ಮತ್ತು ಮನೆಗಳನ್ನು ಕಟ್ಟಿಕೊಟ್ಟಿರುತ್ತಾರೆ ಎಂದರೆ ನನಗೆ ಬಿಟ್ಟು ಉಳಿದವರಿಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ 1 ರವರಿಗೆ ಉಚಿತವಾಗಿ ಮನೆ ಮಂಜೂರಾಗಿತ್ತು ಎಂದರೆ ಸರಿಯಲ್ಲ. ಆ ರೀತಿ ಮನೆ ಮಜೂರಾದ ಕಾರಣ ಮನೆ ಕಟ್ಟಲು ದಿನಾಂಕ 29.05.2007 ರಂದು 40*40 ವಿಸ್ತೀರ್ಣವನ್ನು ಸರ್ವೆ ನಂಬರ್ 147 ರಲ್ಲಿ ನನ್ನ ಮತ್ತು ನನ್ನ ಹೆಂಡತಿಯವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ ಸ್ವತ್ತು ಸರ್ವೆ ನಂಬರ್ ಆದ ಕಾರಣ ಅಡಿಗಳ ಲೆಕ್ಕದಲ್ಲಿ ನೋಟರಿ ಕ್ರಯ ಪತ್ರ ವನ್ನು ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆ ರೀತಿ ಖರೀದಿಸಿದ ನಂತರ ಅವರ ಹೆಸರಿಗೆ ಖಾತೆಯಾಗಿ ಸರ್ಕಾರದಿಂದ ಅನುದಾನ ಬಂದ ಯೋಜನೆಯಡಿ ಮನೆ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ವಿದೇಶಕ್ಕೆ ಹೋಗುತ್ತೇನೆ ಎಂದು ತೋರಿಸಲು ವೀಸಾ ಮತ್ತು ಪಾಸ್ ಪೋರ್ಟ್ ಹಾಜರುಪಡಿಸಿರುತ್ತೇನೆ. ನಮ್ಮ ಊರಿನಲ್ಲಿ ನಮ್ಮ ಜನಾಂಗದವರೆಲ್ಲಾ ಸೇರಿ ಸಂಘ ಮಾಡಿಕೊಂಡು ಅದರಲ್ಲಿ ನಾನು ಸದಸ್ಯ ನಾಗಿದ್ದೆ ಎಂದರೆ ಸರಿಯಲ್ಲ. ನಾನು ಕನ್ನಡ ಮತ್ತು ಇಂಗ್ಲೀಷಿನಲ್ಲಿ ಎರಡರಲ್ಲೂ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಹೆಬ್ಬೆಟ್ಟು ಹಾಕುತ್ತೇನೆ ಎಂದು ಎಂದು ನುಡಿಯುತ್ತಾರೆ. ಸಂಘದ ರೆಗ್ಯೂಲೇಷನ್ ಬುಕ್ಕನಲ್ಲಿ ಇಂಗ್ಲೀಷಿನಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ವಕಾಲತ್ ಮತುತ ವಾದ ಪತ್ರದಲ್ಲಿ ಹೆಬ್ಬಿಟ್ಟಿನ ಗುರುತು ಹಾಕಿರುತ್ತೇನೆ. ನಾನು ಕನ್ನಡ ಮತ್ತು ಇಂಗ್ಲೀಷಿನಲ್ಲಿ ಸಹಿ ಮಾಡಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ವಾದ ಪತ್ರದ ಖಂಡಿಕೆ 6 ರಲ್ಲಿ ಬಾಂಡ್ ಪೇಪರ್ ನಲ್ಲಿ ಇರುವ ಸಹಿ ನನ್ನಾದಾಗಿರುವುದಿಲ್ಲ ಮತ್ತು ನನ್ನ ಹೆಂಡತಿ ಸಹಿ ಮಾಡಿರುವುದಿಲ್ಲ ಎಂದು ಹೇಳಿರುತ್ತೇನೆ. ಸದರಿ ಬಾಂಡ್ ಪೇಪರ್ ಅನ್ನು ಎಲ್ಲಿ ನೋಡಿರುತ್ತೀರಾ ಎಂದರೆ ಯಾರೋ ಪತ್ರ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಅವರು ಯಾರು ಎಂದು ಗೊತ್ತಿಲ್ಲ.

ನಾನೇ ಪತ್ರ ಬರೆದುಕೊಟ್ಟಿರುವುದರಿಂದ ಸದರಿ ವಿಚಾರ ನನಗೆ ಗೊತ್ತಿರುತ್ತದೆ ಎಂದರೆ ಸರಿಯಲ್ಲ. ನಾನೇ ಸಹಿ ಮಾಡಿಕೊಟ್ಟು ನನ್ನದಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಯಾವಾ ದಿನಾಂಕದಂದು ತೊಂದರೆ ಕೊಟ್ಟಿರುತ್ತಾರೆ ಎಂದು ಗೊತ್ತಿಲ್ಲ. ಪ್ರತಿವಾದಿಗಳು ಪೊರ್ಜರಿ ಸಹಿ ಮಾಡಿದ್ದಾರೆ ರಂದು ಪೋಲೀಸ್ ಠಾಣೆಗೆ ದೂರು ಕೋಟ್ಟಿರುತ್ತೇನೆ ಅದರ ದಾಖಲಗಳನ್ನು ಹಾಜರುಪಡಿಸಿರುತ್ತೇನೆ. ಆರೀತಿ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಾನು 20 ಸಾವಿರ ರೂಗಳಿಗೆ ದಾವಾಸ್ತಿಯನ್ನು ಖರೀದಿಸಿರುತ್ತೇನೆ. ಈಗ ದಾವಾಸ್ತಿ ಮೌಲ್ಯ ಎಷ್ಟು ಇದೆ ಎಂದು ಗೊತ್ತಿಲ್ಲ. ಈಗ 50 ಲಕ್ಷ ಬೆಲೆ ಬಾಳುತ್ತೆ ಎಂದರೆ ಸರಿಯಲ್ಲ. ದಾವಾಸ್ತತ್ತಿನ ಮೌಲ್ಯ ಹೆಚ್ಚಾಗಿರವುದರಿಂದ ಪ್ರತಿವಾದಿಗಳಿಗೆ ತೊಂದರೆ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತೊಂದರೆ ಕೊಟ್ಟಿದ್ದಕ್ಕೆ ಪ್ರತಿವಾದಿ 1 ರವರು 2017 ರಲ್ಲಿ ನನ್ನ ವಿರುದ್ದ ದೂರು ಕೊಟ್ಟಿದ್ದರು ಎಂದರೆ ಗೊತ್ತಿಲ್ಲ. ಆ ವಿಚಾರವಾಗಿ ಪೋಲೀಸ್ ಠಾಣೆಯಲ್ಲಿ ಹಿಂಬರಹ ಕೊಟ್ಟಿರುತ್ತಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿ ನನ್ನ ವಿರುದ್ದ ಅ.ದಾ ನಂ 85/2018 ರಂತೆ ದಾವೆ ಹೂಡಿರುತ್ತಾರೆ ಎಂದರೆ ಸರಿ. ಸದರಿ ದಾವೆ ಪ್ರತಿವಾದಿ 1 ರವರ ಪರವಾಗಿ ಡಿಕ್ರಿಯಾಗಿರುತ್ತದೆ ಎಂದರೆ ಸರಿಯಲ್ಲ. ದಾವಾಸ್ತಿಯ ಖಾತೆ ಈಗಲೂ ಪ್ರತಿವಾದಿ 1 ರವರ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ಸರ್ಕಾರದಿಂದ ಮಂಜುರು ಮಾಡಿರುವ ಮನೆಯಲ್ಲೆ ಪ್ರತಿವಾದಿಗಳ ಕಟುಂಬ ವಾಸಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 147 ರಲ್ಲಿರು ಜಮೀನು ಅನ್ನು ಎಲ್ಲರಿಗೂ ಮಾರಾಟ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸ. ನಂ.147 ರಲ್ಲಿ ಮಹಿಳಾ ಸಮುದಾಯ ಭವನ ಮತ್ತು ದೇವಸ್ಥಾನ ಇದೆ ಎಂದರೆ ಸರಿಯಲ್ಲ. ಸರ್ಕಾರದಿಂದ ಕುಡಿಯುವ ನೀರಿಗೆ ಬೋರ್ ವೆಲ್ ಕೊರೆಸಿ ಚರಂಡಿ ಮತ್ತು ರಸ್ತೆ ಮಾಡಿದ್ದಾರೆ ಎಂದರೆ ಸರಿಯಲ್ಲ. ದಾವಾಸ್ತಿ ವ್ಯವಸಾಯದ ಜಮೀನು ಆಗಿರುವುದಿಲ್ಲ ವ್ಯವಸಾಯೇತರ ಚಟುವಟಿಕೆಗಳಿಗೆ ಉಪಾಯೋಗ ಮಾಡಲಾಗುತ್ತಿದೆ ಎಂದರೆ ಸರಿಯಲ್ಲ. ನ್ಯಾಯಾಲಯದಲ್ಲಿ ಕಮೀಷನರ್ ನೇಮಕ ಮಾಡಿ ದಾವಾಸ್ತಿಯ ಬಗ್ಗೆ ವರದಿ ಪಡೆದುಕೊಳ್ಳಲು ನನ್ನದೇನು ತಕರಾರು ಇರುವುದಿಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ